ಕಾರ್ಯದರ್ಶಿ
ಕನ್ನಡ ಅಭಿವೃದ್ಧಿ ಪ್ರಾಧಿಕಾರ
ಬೆಂಗಳೂರು

ದೂರವಾಣಿ : ಕಛೇರಿ : 22286773
22033239
ಕೊಠಡಿ ಸಂಖ್ಯೆ: 263, ಎರಡನೇ ಮಹಡಿ
ವಿಧಾನಸೌಧ, ಬೆಂಗಳೂರು – 560 001

ಸಂಖ್ಯೆ: ಕಅಪ್ರಾ/ಕಾ–2/ಕ.ಮಾ.ಪ್ರ.ಮ/06/2020–21 ದಿನಾಂಕ 16/08/2020

ಇವರಿಗೆ,

ಪ್ರಾಂಶುಪಾಲರು

---------ಜಿಲ್ಲೆ, ಮಹಾರಾಷ್ಟ್ರ ರಾಜ್ಯ.

ಮಾನ್ಯರೇ,

ವಿಷಯ:– 2020–21ನೇ ಸಾಲಿನಲ್ಲಿ ಹೊರ ರಾಜ್ಯದ ವಿದ್ಯಾರ್ಥಿಗಳಿಗೆ ಕನ್ನಡ ಮಾಧ್ಯಮ ಪ್ರಶಸ್ತಿ ನೀಡುವ ಕುರಿತು.

* * * * * *

ಕನ್ನಡ ಅಭಿವೃದ್ಧಿ ಪ್ರಾಧಿಕಾರವು ಕಳೆದ 9 ವರ್ಷಗಳಿಂದ ಮಹಾರಾಷ್ಟ್ರ ರಾಜ್ಯದಲ್ಲಿ ಹೆಚ್.ಎಸ್.ಸಿ. ತರಗತಿಯನ್ನು ಕನ್ನಡ ಮಾಧ್ಯಮದಲ್ಲಿ ಅಭ್ಯಾಸ ಮಾಡಿ ಶಾಲೆಗೆ ಅತಿ ಹೆಚ್ಚು ಅಂಕಗಳಿಸಿದ ವಿದ್ಯಾರ್ಥಿಗಳನ್ನು ಗುರುತಿಸಿ ಪುರಸ್ಕಾರ ನೀಡಿ ಪ್ರೋತ್ಸಾಹಿಸುತ್ತಿರುವುದು ತಮಗೆ ತಿಳಿದ ವಿಷಯ. 2020–20ನೇ ಕನ್ನಡ ಮಾಧ್ಯಮ ಪ್ರಶಸ್ತಿ ವಿತರಿಸಲು ಅರ್ಹ ವಿದ್ಯಾರ್ಥಿಗಳ ಮಾಹಿತಿ ಒದಗಿಸಿ ಸಹಕಾರ ನೀಡಿದ್ದಕ್ಕೆ ಧನ್ಯವಾದಗಳು.

ಪ್ರಸಕ್ತ 2020–21ನೇ ಸಾಲಿನ ಮಹಾರಾಷ್ಟ್ರ ರಾಜ್ಯದ ವಿದ್ಯಾರ್ಥಿಗಳಿಗೆ ಕನ್ನಡ ಮಾಧ್ಯಮ ಪ್ರಶಸ್ತಿ ಕಾರ್ಯಕ್ರಮವನ್ನು ಆಯೋಜಿಸಲು ಉದ್ದೇಶಿಸಲಾಗಿದೆ. ಈ ಸಂಬಂಧ ಹೆಚ್.ಎಸ್.ಸಿ. ತರಗತಿಯನ್ನು ಕನ್ನಡ ಮಾಧ್ಯಮದಲ್ಲಿ ಅಭ್ಯಾಸ ಮಾಡಿ 2020 ಮಾರ್ಚ್ ತಿಂಗಳಲ್ಲಿ ಪರೀಕ್ಷೆ ಬರೆದು ಹೆಚ್ಚು ಅಂಕಗಳನ್ನು ಪಡೆದು ಉತ್ತೀರ್ಣರಾಗಿ ಶಾಲಾ ಮಟ್ಟದಲ್ಲಿ ಪ್ರಥಮ, ದ್ವಿತೀಯ ಹಾಗೂ ತೃತೀಯ ಸ್ಥಾನ ಪಡೆದ ಮೊದಲ ಮೂರು ವಿದ್ಯಾರ್ಥಿಗಳ ಪಟ್ಟಿಯನ್ನು ಲಗತ್ತಿಸಿರುವ ನಮೂನೆಯಲ್ಲಿ ಕನ್ನಡ ಮತ್ತು ಆಂಗ್ಲ ಭಾಷೆಯಲ್ಲಿ ಸಿದ್ಧಪಡಿಸಿ ಸಾಫ್ಟ್ ಮತ್ತು ಹಾರ್ಡ್ ಪ್ರತಿಗಳನ್ನು ನೀಡಲು ಕೋರಿದೆ.

1. ಕಳೆದ ಸಾಲಿನಂತೆ ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿ **2020ನೇ ಮಾರ್ಚ್/ಏಪ್ರಿಲ್** ಮಾಹೆಯಲ್ಲಿ ನಡೆದ 12ನೇ ತರಗತಿಯನ್ನು (ಹೆಚ್.ಎಸ್.ಸಿ.) ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿ ಅತಿ ಹೆಚ್ಚು ಅಂಕಗಳಿಸಿ ಶಾಲಾ ಮಟ್ಟದಲ್ಲಿ ಪ್ರಥಮ, ದ್ವಿತೀಯ ಹಾಗೂ ತೃತೀಯ ಸ್ಥಾನ ಪಡೆದು ಉತ್ತೀರ್ಣರಾದ ವಿದ್ಯಾರ್ಥಿಗಳ ವಿವರಗಳನ್ನು ಮಾತ್ರ ನೀಡಲು ಕೋರಿದೆ. ಈ ಮೂರು ಸ್ಥಾನಗಳಲ್ಲಿ ಒಂದು ವೇಳೆ ಒಂದೇ ಅಂಕಗಳನ್ನು ಪಡೆದ ವಿದ್ಯಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿದ್ದರೆ ಅವರನ್ನೂ ಪರಿಗಣಿಸಿ ಪಟ್ಟಿಯಲ್ಲಿ ಸೇರಿಸಬೇಕು.
2. ವಿದ್ಯಾರ್ಥಿಗಳ ವಿವರವನ್ನು ನೀಡುವಾಗ ಹೆಚ್.ಎಸ್.ಸಿ. ಬೋರ್ಡ್‌ನಿಂದ ಪಡೆದ ಪಟ್ಟಿಯನ್ನು ಶಾಲಾ ಮುಖ್ಯಸ್ಥರ ದೃಢೀಕರಣದೊಂದಿಗೆ ಹಾಗೂ ವಿದ್ಯಾರ್ಥಿಯ ಅಂಕಪಟ್ಟಿಯೊಂದಿಗೆ, (ಹೆಸರು, ಶಾಲೆಯ ಹೆಸರು, ಮನೆಯ ವಿಳಾಸ, ಪೋಷಕರ/ವಿದ್ಯಾರ್ಥಿಯ ದೂರವಾಣಿ/ಮೊಬೈಲ್ ಸಂಖ್ಯೆ ಈ ಮಾಹಿತಿಗಳು ಪ್ರಾಧಿಕಾರಕ್ಕೆ ಅತ್ಯಂತ ಅವಶ್ಯವಾಗಿದೆ) ಕಳುಹಿಸುವುದು. ಕಡ್ಡಾಯವಾಗಿ ವಿದ್ಯಾರ್ಥಿಗಳ ಹೆಸರು ಅಂಕಪಟ್ಟಿಯಲ್ಲಿ ಇದ್ದಂತೆಯೇ ಇರುವುದು.
3. ಮೇಲಿನ ಮಾಹಿತಿಯನ್ನು (secretary.kanpra@gmail.com) ಸ್ಕ್ಯಾನ್ ಮಾಡಿ ಸಲ್ಲಿಸುವುದು ಜೊತೆಗೆ ಹಾರ್ಡ್ ಪ್ರತಿಯನ್ನು ಅಂಚೆ ಮೂಲಕ ಕಳುಹಿಸಿಕೊಡುವುದು.
4. ದಿನಾಂಕ 31.08.2020 ರ ಒಳಗಾಗಿ ಅವಶ್ಯಕ ಮಾಹಿತಿಯನ್ನು ಕಡ್ಡಾಯವಾಗಿ ಕಳುಹಿಸುವುದು. ಒಂದು ವೇಳೆ ಕಳುಹಿಸದಿದ್ದಲ್ಲಿ ವಿದ್ಯಾರ್ಥಿಯ ಹೆಸರನ್ನು ಕೈಬಿಟ್ಟು ಉಳಿದವರನ್ನು ಪ್ರಶಸ್ತಿಗೆ ಪರಿಗಣಿಸಲಾಗುವುದು.
5. ಕೋವಿಡ್–19ರ ಹಿನ್ನಲೆಯಲ್ಲಿ 2020–21ನೇ ಸಾಲಿಗೆ ಸೀಮಿತ ಆಯವ್ಯಯ ಒದಗಿಸಲಾಗಿದ್ದು, ಹೆಚ್ಚುವರಿ ಅನುದಾನ ಸರ್ಕಾರಕ್ಕೆ ಕೋರಿದ್ದು, ಅನುದಾನ ಬಿಡುಗಡೆಯಾದ ನಂತರ ಕ್ರಮವಹಿಸಲಾಗುವುದು.

ಕಾರ್ಯದರ್ಶಿ
ಕನ್ನಡ ಅಭಿವೃದ್ಧಿ ಪ್ರಾಧಿಕಾರ

## 2020-21ನೇ ಸಾಲಿನ ಮಹಾರಾಷ್ಟ್ರ ರಾಜ್ಯದ ಹೆಚ್.ಎಸ್.ಸಿ. ಕನ್ನಡ ಮಾಧ್ಯಮ ಪ್ರಶಸ್ತಿಗೆ ಸಂಬಂಧಿಸಿದ ಶಾಲೆಗಳ ವಿವರ

| ಕ್ರ.ಸಂ. | ಶಾಲೆಯ ವಿವರ |
|---|---|
| 1 | ಶ್ರೀ ಕಾಲಿಕಾಮಾತಾ ಆರ್ಟ್ಸ್ ಜ್ಯೂನಿಯರ್ ಕಾಲೇಜು, ನಿಲಂ ಶ್ರಮಜೀವಿ ನಗರ, ಸೊಲ್ಲಾಪುರ, ಸೊಲ್ಲಾಪುರ ಜಿಲ್ಲೆ. |
| 2 | ಶ್ರೀ ಶಿವಚಲೇಶ್ವರ ಜ್ಯೂನಿಯರ್ ಕಾಲೇಜು, ಮೈಂದರ್ಗಿ, ಅಕ್ಕಲಕೋಟೆ ತಾಲ್ಲೂಕು, ಸೊಲ್ಲಾಪುರ ಜಿಲ್ಲೆ. |
| 3 | ಎಚ್.ಜಿ. ಪ್ರಚಂಡೆ ಜ್ಯೂನಿಯರ್ ಕಾಲೇಜು, ನಾಗಣಸೂರ, ಅಕ್ಕಲಕೋಟೆ ತಾಲ್ಲೂಕು, ಸೊಲ್ಲಾಪುರ ಜಿಲ್ಲೆ. |
| 4 | ಶ್ರೀ ಕಾಶಿ ವಿಶ್ವೇಶ್ವರ ಜ್ಯೂನಿಯರ್ ಕಾಲೇಜು, ಜೇವೂರ, ಅಕ್ಕಲಕೋಟೆ ತಾಲ್ಲೂಕು, ಸೊಲ್ಲಾಪುರ ಜಿಲ್ಲೆ. |
| 5 | ಶ್ರೀ ಗುರುಶಾಂತಲಿಂಗೇಶ್ವರ ಜ್ಯೂನಿಯರ್ ಕಾಲೇಜು, ದುಧನಿ, ಅಕ್ಕಲಕೋಟೆ ತಾಲ್ಲೂಕು, ಸೊಲ್ಲಾಪುರ ಜಿಲ್ಲೆ. |
| 6 | ಶ್ರೀ ಸಿದ್ಧರಾಮೇಶ್ವರ ಜ್ಯೂನಿಯರ್ ಕಾಲೇಜು, ತೋಳನೂರ, ಅಕ್ಕಲಕೋಟೆ ತಾಲ್ಲೂಕು, ಸೊಲ್ಲಾಪುರ ಜಿಲ್ಲೆ. |
| 7 | ಮಂಗ್ರೂಳೆ ಜ್ಯೂನಿಯರ್ ಕಾಲೇಜು, ಅಕ್ಕಲಕೋಟ, ಅಕ್ಕಲಕೋಟೆ ತಾಲ್ಲೂಕು, ಸೊಲ್ಲಾಪುರ ಜಿಲ್ಲೆ. |
| 8 | ಸಮತಾ ಜ್ಯೂನಿಯರ್ ಕಾಲೇಜು, ಉಮದಿ, ಜತ್ತ ತಾಲ್ಲೂಕು, ಸಾಂಗಲಿ ಜಿಲ್ಲೆ. |
| 9 | ಶರಣ ಗುರೂಜಿ ಜ್ಯೂನಿಯರ್ ಕಾಲೇಜು, ಬೆಳ್ಳುಂಡಗಿ, ಜತ್ತ ತಾಲ್ಲೂಕು, ಸಾಂಗಲಿ ಜಿಲ್ಲೆ. |
| 10 | ಭಾರತ ಜ್ಯೂನಿಯರ್ ಕಾಲೇಜು. ಉಟಗಿ (ಕಲಾ, ಕನ್ನಡ ಮಾಧ್ಯಮ), ಜತ್ತ ತಾಲ್ಲೂಕು, ಸಾಂಗಲಿ ಜಿಲ್ಲೆ. |
| 11 | ಭಾರತ ಜ್ಯೂನಿಯರ್ ಕಾಲೇಜು, ಉಟಗಿ (ವಾಣಿಜ್ಯ, ಕನ್ನಡ ಮಾಧ್ಯಮ), ಜತ್ತ ತಾಲ್ಲೂಕು, ಸಾಂಗಲಿ ಜಿಲ್ಲೆ. |
| 12 | ರಾಜಾರಾಮಬಾಪು ಪಾಟೀಲ, ಜ್ಯೂನಿಯರ್ ಕಾಲೇಜು, ಸಂಖ, ಜತ್ತ ತಾಲ್ಲೂಕು, ಸಾಂಗಲಿ ಜಿಲ್ಲೆ. |
| 13 | ಕೆ.ಎಮ್. ಜ್ಯೂನಿಯರ್ ಕಾಲೇಜು, ಜತ್ತ, ಜತ್ತ ತಾಲ್ಲೂಕು, ಸಾಂಗಲಿ ಜಿಲ್ಲೆ. |
| 14 | ಶ್ರೀ ವಿಜಯ ವಿಠ್ಠಲ ಜ್ಯೂನಿಯರ್ ಕಾಲೇಜು, ಸೋನ್ಯಾಳ, ಜತ್ತ ತಾಲ್ಲೂಕು, ಸಾಂಗಲಿ ಜಿಲ್ಲೆ. |
| 15 | ಎಮ್.ವ್ಹಿ. ಜ್ಯೂನಿಯರ್ ಕಾಲೇಜು, ಉಮದಿ, ಜತ್ತ ತಾಲ್ಲೂಕು, ಸಾಂಗಲಿ ಜಿಲ್ಲೆ. |
| 16 | ಶ್ರೀ ಗುರುಬಸವ ಜ್ಯೂನಿಯರ್ ಕಾಲೇಜು, ಸಂಖ (ಕಲಾ, ಕನ್ನಡ ಮಾಧ್ಯಮ), ಜತ್ತ ತಾಲ್ಲೂಕು, ಸಾಂಗಲಿ ಜಿಲ್ಲೆ. |
| 17 | ಶ್ರೀ ಗುರುಬಸವ ಜ್ಯೂನಿಯರ್ ಕಾಲೇಜು ಸಂಖ (ವಿಜ್ಞಾನ, ಕನ್ನಡ ಮಾಧ್ಯಮ), ಜತ್ತ ತಾಲ್ಲೂಕು, ಸಾಂಗಲಿ ಜಿಲ್ಲೆ. |
| 18 | ಅಥರ್ವ ಸಾಂಗ್ಲಿಕರ್ ಜ್ಯೂನಿಯರ್ ಕಾಲೇಜು, ಗುಗವಾಡ, ಜತ್ತ ತಾಲ್ಲೂಕು, ಸಾಂಗಲಿ ಜಿಲ್ಲೆ. |
| 19 | ಜಯಶಂಕರ ಕಿರಿಯ ಕಾಲೇಜು, ತಡವಳ, ಅಕ್ಕಲಕೋಟೆ ತಾಲ್ಲೂಕು, ಸೊಲ್ಲಾಪುರ ಜಿಲ್ಲೆ. |
| 20 | ನ್ಯೂ ಇಂಗ್ಲೀಷ ಸ್ಕೂಲ್, ಮಾಡಗ್ಯಾಳ, ಜತ್ತ ತಾಲ್ಲೂಕು, ಸಾಂಗಲಿ ಜಿಲ್ಲೆ. |

## ಕನ್ನಡ ಅಭಿವೃದ್ಧಿ ಪ್ರಾಧಿಕಾರದ 2020–2021ನೇ ಸಾಲಿನ ಮಹಾರಾಷ್ಟ್ರ ರಾಜ್ಯ ಕನ್ನಡ ಮಾಧ್ಯಮ ಪ್ರಶಸ್ತಿಗೆ ಅರ್ಹ ವಿದ್ಯಾರ್ಥಿಗಳ ಆಯ್ಕೆ ಪಟ್ಟಿ ನಮೂನೆ

### 2019–20ನೇ ಸಾಲಿನ ಶೈಕ್ಷಣಿಕ ವರ್ಷದಲ್ಲಿ ಕನ್ನಡ ಮಾಧ್ಯಮದಲ್ಲಿ ಹೆಚ್.ಎಸ್.ಸಿ ತರಗತಿಯಲ್ಲಿ ಅತೀ ಹೆಚ್ಚು ಅಂಕಗಳಿಸಿದ ಶಾಲಾ ವಿದ್ಯಾರ್ಥಿಗಳ ವಿವರ

(ಪ್ರಥಮ, ದ್ವಿತೀಯ ಮತ್ತು ತೃತೀಯ)

ಕಾಲೇಜು ಕ್ರಮ ಸಂಖ್ಯೆ :

ಕ ಅ ಪ್ರಾ ನೀಡಿರುವ ಶಾಲಾ ಸಂಖ್ಯೆ:

ಕಾಲೇಜು ಹೆಸರು :

| ಕ್ರ ಸಂ. | ವಿದ್ಯಾರ್ಥಿಯ ಹೆಸರು (ಕನ್ನಡದಲ್ಲಿ) | ವಿದ್ಯಾರ್ಥಿಯ ಹೆಸರು (ಆಂಗ್ಲದಲ್ಲಿ) | ಲಿಂಗ | ನೋಂದಣಿ ಸಂಖ್ಯೆ | ಪಡೆದ ಅಂಕಗಳು | ಶೇಕಡವಾರು | ಆಯ್ಕೆಗೊಂಡ ಸ್ಥಾನ | ಪ್ರವರ್ಗ | ಶಾಲೆಯ ಹೆಸರು ಮತ್ತು ವಿಳಾಸ | ಶಾಲಾ ಮುಖ್ಯಸ್ಥರ ದೂರವಾಣಿ ಸಂಖ್ಯೆ | ಶಾಲಾ / ಶಾಲಾ ಮುಖ್ಯಸ್ಥರ ಇ-ಮೇಲ್ ವಿಳಾಸ | ವಿದ್ಯಾರ್ಥಿಯ ವಿಳಾಸ | ವಿದ್ಯಾರ್ಥಿಯ ಬ್ಯಾಂಕ್ ಖಾತೆ ಸಂಖ್ಯೆ ಮತ್ತು ಐಎಫ್‌ಎಸ್‌ಸಿ ಸಂಖ್ಯೆ | ಬ್ಯಾಂಕ್ ಹೆಸರು ಮತ್ತು ಶಾಖೆಯ ವಿಳಾಸ | ವಿದ್ಯಾರ್ಥಿಯ ದೂರವಾಣಿ ಸಂಖ್ಯೆ | ಷರಾ |
|---|---|---|---|---|---|---|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 | 11 | 12 | 13 | 14 | 15 | 16 | 17 |
| | | | ಜಿಲ್ಲೆ: | | | | | | | | | | | | | |
| | | | 1. ತಾಲ್ಲೂಕು: | | | | | | | | | | | | | |
| 1 | | | | | | | | | | | | | | | | |
| 2 | | | | | | | | | | | | | | | | |
| 3 | | | | | | | | | | | | | | | | |

ಷರಾ : – ನಮೂನೆಯ ಪ್ರತಿ ಕಲಂಗಳ ಮಾಹಿತಿ ಹಾಗೂ ವಿದ್ಯಾರ್ಥಿಗಳ ಪೂರ್ಣ ವಿಳಾಸ ಮತ್ತು ದೂರವಾಣಿ ಸಂಖ್ಯೆ (ನಿವಾಸ ಮತ್ತು ಶಾಲೆ/ಕಾಲೇಜು) ಅಂಚೆ ಪಿನ್ ಕೋಡ್ ಸಂಖ್ಯೆಯನ್ನು ಸಹಿತ **ಕಡ್ಡಾಯವಾಗಿ ರಾಜ್ಯಭಾಷೆಯಾದ ಕನ್ನಡದಲ್ಲಿ ಹಾರ್ಡ್ ಮತ್ತು ಸಾಫ್ಟ್ ಪ್ರತಿಯನ್ನು ಎಂ.ಎಸ್. ಎಕ್ಸೆಲ್‌ನಲ್ಲಿ ನಿಗದಿತ ನಮೂನೆಯಲ್ಲಿಯೇ ನೀಡುವುದು.**

ಅಧಿಕೃತ ಸಹಿ ಮತ್ತು ಮೊಹರು